ಗೇಟು ತೆರೆಯುವ ಸಪ್ಪಳ ಆಯಿತೂ ಎಂದರೆ, ಮನೆಯಲ್ಲಿರುವ ಚಿಳ್ಳಾರಿಗಳೆಲ್ಲ ಹಣಕಿ ಹಾಕುತ್ತಿದ್ದ ಕಾಲವದು. ಅಪರಿಚಿತರನ್ನು ಕಾಣುತ್ತಲೇ ಮನೆಗೆ ಯಾರೋ ನೆಂಟರು ಬಂದರು ಅಂತ ಗೊತ್ತಾಗುತ್ತಿತ್ತು. 'ಅಮ್ಮಾ... ಯಾರೋ ಬಂದ್ರು' ಅಂತ ಕೂಗುತ್ತಲೇ ಅಡುಗೆ ಮನೆಗೆ ಓಡುತ್ತಿದ್ದೆವು. ಅಡುಗೆ ಮಾಡುತ್ತಿದ್ದ ಅಮ್ಮನಿಗೆ, ನಡುಮನೆಯಲ್ಲಿ ಕುಳಿತು ಸೊಪ್ಪು, ತರಕಾರಿ, ಶೇಂಗಾ ಹೀಗೆ ಏನಾದರೊಂದು ಬಿಡಿಸುತ್ತಲೋ ಅಥವಾ ಶಾವಿಗೆ ಹೊಸೆಯುತ್ತಲೋ, ಬತ್ತಿ ಮಾಡುತ್ತಲೋ ಕುಳಿತಿದ್ದ ಅಜ್ಜಿ ಕುಳಿತಲ್ಲಿಂದಲೇ 'ನೋಡವ್ವಾ ಯಾರೋ ಬಂದಾರಂತೆ' ಎಂದು ಕೂಗು ಹಾಕಿ ಕಣ್ಣನ್ನು ಬಾಗಿಲಿಗೆ ನೆಟ್ಟು ಕೂಡುತ್ತಿತ್ತು. ಕೈತೊಳೆದುಕೊಂಡು ಸೆರಗಿಗೆ ಒರೆಸಿಕೊಳ್ಳುತ್ತಾ ಅಮ್ಮ ಹೊರಬರುವುದಕ್ಕೂ, ನೆಂಟರು ಬಾಗಿಲಿಗೆ ಬರುವುದಕ್ಕೂ ಸರಿಹೋಗುತ್ತಿತ್ತು.

ಅವರನ್ನು ನೋಡುತ್ತಲೇ ಮುಖದ ತುಂಬ ತುಂಬು ನಗೆ ತುಂಬಿಕೊಂಡು 'ಬರ್ರಿ ಕಕ್ಕಪ್ಪ', 'ಬರ್ರಿ ಸಣ್ಣಮ್ಮ', 'ಬರ್ರಿ ಮಾವ'... ಹೀಗೆ ಏನಾದರೊಂದು ಸಂಭೋದಿಸುತ್ತಾ, 'ಅಪರೂಪ ಆಗ್ಬಿಟ್ರಿ' ಎಂದು ವಿಚಾರಿಸುತ್ತಲೇ, ಅವರಿಗೆ ಕೈಕಾಲು ತೊಳೆಯಲು ನೀರು ತಂದುಕೊಡುವುದಕ್ಕೆ ನಮಗೆ ಹೇಳುತ್ತಿದ್ದಳು. ಬಂದವರು ಯಾರು, ಏನು ಸಂಬಂಧವಾಗಬೇಕು ಎಂದು ಬಹಳಷ್ಟು ಸಲ ಗೊತ್ತಿರುತ್ತಲೇ ಇರಲಿಲ್ಲ. ಅಜ್ಜಿಯ ಕಿವಿಯ ಬಳಿ ಹೋಗಿ 'ಯಾರಜ್ಜಿ ಅವರೂ' ಎನ್ನುತ್ತಿದ್ದಂತೆ, ಅದೇನೇನೋ ಬಾದರಾಯಣ ಸಂಬಂಧ ಹೇಳುತ್ತಿದ್ದಳು. ನಮಗಂತೂ ಏನೂ ಅರ್ಥವಾಗುತ್ತಿರಲಿಲ್ಲ. ಆಗೆಲ್ಲ ಸಂಬಂಧದ ಒಳಗೊಳಗೇ ಹೆಚ್ಚು ಮದುವೆಗಳು ನಡೆಯುತ್ತಿದ್ದುದರಿಂದ, 'ಕುರಿ ಕೊಟ್ಟವರಿಗೆ ಮರಿ ಕೊಡು, ಮರಿ ಕೊಟ್ಟವರಿಗೆ ಕುರಿ ಕೊಡು' ಎಂಬಂತೆ ಬಹುತೇಕ ಸಂಬಂಧಗಳು ಒಳಗೊಳಗೇ ಸುತ್ತಿಕೊಂಡಿರುತ್ತಿದ್ದವು. ಹಾಗಾಗಿ ಅಜ್ಜಿ ಹೇಳಿದ್ದೆಲ್ಲ ಅರ್ಥವಾಯಿತೆನ್ನುವಂತೆ ಹೂಂಗುಟ್ಟುತ್ತಲೇ ಒಬ್ಬರು ನೀರು, ಒಬ್ಬರು ಟವೆಲ್ಲು, ಮತ್ತೊಬ್ಬರು ಬಂದವರ ಕೈಚೀಲವನ್ನೋ, ವಾಯರ್ ಪುಟ್ಟಿಯನ್ನೋ ತೆಗೆದುಕೊಂಡು ಹೋಗಿ ಒಳಗಿಡುವುದು... ಹೀಗೆ ಬಂದವರೊಂದಿಗೆ ಮನೆಯ ಎಲ್ಲ ಮಕ್ಕಳೂ ಒಡನಾಡುತ್ತಿದ್ದರು. ಅವರು ಏನು ಹೆಸರು, ಎಷ್ಟನೇ ಕ್ಲಾಸು, ಎಷ್ಟುದ್ದ ಬೆಳೆದುಬಿಟ್ಟಿದ್ದೀಯಾ ಅಂತೆಲ್ಲಾ ಪ್ರೀತಿಯಿಂದ ಮಾತನಾಡಿಸುತ್ತಲೇ, ಹೊರಗೆ ಕೈಕಾಲು ಮುಖ ತೊಳೆದು, ಟವೆಲ್ಲಿನಲ್ಲಿ ಒರೆಸಿಕೊಳ್ಳುತ್ತಲೇ ಒಳಬರುತ್ತಿದ್ದರು. ಅಷ್ಟು ಹೊತ್ತಿಗಾಗಲೇ ಒಳಗಡೆ ಚಿಕ್ಕಮ್ಮನೋ, ಸೋದರತ್ತೆಯೋ ಅತಿಥಿಗಳಿಗೆ ಕಾಫಿ, ಟೀ, ಪಾನಕ ರೆಡಿ ಮಾಡಿಕೊಂಡು ತಂದಿರುತ್ತಿದ್ದರು. ಎಲ್ಲರೂ ಸರ್ಕಾರಿ ಶಾಲೆಗೇ ಹೋಗುತ್ತಿದ್ದುದರಿಂದ ಯಾವ ಶಾಲೆ ಎಂದು ಅಪ್ಪಿತಪ್ಪಿಯೂ ಕೇಳುವ ಪರಿಪಾಟವಿರಲಿಲ್ಲ.

ಬಂದವರ ಜೊತೆಗೆ ಸ್ವಲ್ಪ ಹಿರಿಯ ಹೆಂಗಸರಿದ್ದರೆ ಅವರೂ ಅಜ್ಜಿಯ ಜೊತೆಗೆ ಕಷ್ಟ ಸುಖ ವಿಚಾರಿಸುತ್ತಾ, ಜೊತೆಗೆ ಅವರ ಕೆಲಸದಲ್ಲಿ ಕೈಜೋಡಿಸುತ್ತಾ ಅಲ್ಲೇ ನಡುಮನೆಯಲ್ಲಿ ಕುಳಿತುಬಿಡುತ್ತಿದ್ದರು. ಸ್ವಲ್ಪ ಚಿಕ್ಕವರಿದ್ದರೆ ಅಡುಗೆ ಮನೆಯಲ್ಲಿ ಅಮ್ಮ, ಚಿಕ್ಕಮ್ಮನ ಜೊತೆ ಅಡುಗೆ ಕೆಲಸಕ್ಕೆ ಕೈಜೋಡಿಸುತ್ತಿದ್ದರು. ಮಕ್ಕಳಿದ್ದರೆ ನಮ್ಮ ಜೊತೆಗೆ ಆಡಲು ಬರುತ್ತಿದ್ದರು. ಯಾರೇ ಬಂದರೂ ಹೂವು, ಹಣ್ಣು ತರುವುದು ಮರೆಯುತ್ತಿರಲಿಲ್ಲ. ಹೊರಗಡೆ ಕೆಲಸಕ್ಕೋ, ಕಾಲೇಜಿಗೋ ಹೋಗಿದ್ದ ಗಂಡಸರು ಮನೆಗೆ ಬರುತ್ತಿದ್ದಂತೆ ಬಂದವರನ್ನು ಪ್ರೀತಿಯಿಂದ ವಿಚಾರಿಸಿಕೊಳ್ಳುತ್ತಾ ಹೊಲ, ಮಳೆ, ಬೆಳೆ, ರಾಜಕೀಯ ಅಂತೆಲ್ಲ ಲೋಕಾಭಿರಾಮವಾಗಿ ಮಾತನಾಡುತ್ತಾ ಕುಳಿತುಕೊಳ್ಳುತ್ತಿದ್ದರು.

ನೆಂಟರು ಬಂದಾಗ ಮನೆಯಲ್ಲಿ ಸಿಹಿ ಮಾಡೇ ಮಾಡುತ್ತಾರೆಂದು ಗೊತ್ತಿದ್ದುದರಿಂದ ನಮಗೆಲ್ಲ ಖುಷಿಯೋ ಖುಷಿ. ಅಟ್ಟದ ಮೇಲೆ ಹತ್ತಿ ಶಾವಿಗೆ, ಹಪ್ಪಳ, ಸಂಡಿಗೆ ಇಳಿಸಿಕೊಡುವುದು, ಅವರಿಗೆಲ್ಲ ಊಟಕ್ಕೆ ಅಣಿ ಮಾಡುವುದು ಎಲ್ಲ ಕುಣಿಕುಣಿಯುತ್ತಲೇ ಮಾಡುತ್ತಿದ್ದೆವು. ಚಿಕ್ಕ ಚಿಕ್ಕ ಪಾತ್ರೆಗಳಲ್ಲಿ ಅಡುಗೆ ನೋಡಿದ ನೆನಪೇ ಇಲ್ಲ. ಏನಿದ್ದರೂ ಮೂರು ಗುಂಡಿನ ಎರಡು ದೊಡ್ಡ ಒಲೆಯ ಮೇಲೆ ದೊಡ್ಡ ದೊಡ್ಡ ಪಾತ್ರೆಗಳಲ್ಲಿ ಅಡುಗೆ ಸಿದ್ಧವಾಗುತ್ತಿತ್ತು. ನಡುನಡುವೆ ಕಾಫೀ, ಟೀ ಅಂತ ಅದೆಷ್ಟು ಸಲ ದೊಡ್ಡ ಪಾತ್ರೆ ಇಳಿಸಿ ಇಡುತ್ತಿದ್ದರೋ ಲೆಕ್ಕಕ್ಕೇ ಇಲ್ಲ. ಅಷ್ಟೆಲ್ಲ ಮಾಡಿದರೂ ಮನೆಯ ಹೆಂಗಸರ ಮುಖದಲ್ಲಿ ಕೆಲಸ ಮಾಡಿದ ಸುಸ್ತು, ಅಸಹನೆ, ಕೋಪ, ಒಮ್ಮೆಯೂ ಕಂಡೇ ಇಲ್ಲ. ಬಂದವರು ಯಾವ ಭಿಡೆಯೂ ಇಟ್ಟುಕೊಳ್ಳದೆ ಊಟ ಮಾಡುತ್ತಾ 'ರತ್ನಕ್ಕ ಸಾರು ತುಂಬಾ ಚೆನ್ನಾಗಿ ಮಾಡಿದ್ದೀಯಾ', 'ರಾಧಕ್ಕಾ ಕೋಸಂಬರಿ ಹೈಕ್ಲಾಸ್' ಎಂದು ಲೊಟ್ಟೆ ಹೊಡೆಯುತ್ತಾ ಉಣ್ಣುತ್ತಿದ್ದರೆ ಮನೆಯ ಹೆಂಗಸರ ಮುಖದಲ್ಲಿ ಸಂತೃಪ್ತ ಭಾವ. ಅವರು ತಟ್ಟೆಯ ಮೇಲೆ ಕೈಅಡ್ಡ ಹಿಡಿದರೂ ಬಿಡದೆ 'ಇನ್ನೂ ಸ್ವಲ್ಪ ಹಾಕಿಸಿಕೊಳ್ಳಿ' ಎಂದು ಹಾಕಿಯೇ ಬಿಡುತ್ತಿದ್ದರು. ಇನ್ನು ಅಡುಗೆ ಆಗುವ ಹೊತ್ತಿಗೆ ಅದೆಷ್ಟು ಸಲ ಅಂಗಡಿಗೆ ಉಪ್ಪು, ಹುಣಿಸಿಹಣ್ಣು, ಚಹಾಪುಡಿ, ಕಾಫೀ ಪುಡಿ ಅಂತ ಸಾಮಾನು ತರಲು ಮಕ್ಕಳು ಎಡಕಾಡುತ್ತಿದ್ದೆವೋ ನಮಗೇ ಗೊತ್ತಿಲ್ಲ. ಅಂಗಡಿಯವನು ನಮ್ಮ ಜೊತೆ ಇದ್ದ ಹೊಸಬರನ್ನು ನೋಡಿ, ಯಾರು ಬಂದಿದ್ದಾರೆ, ಏನಾಗಬೇಕು, ಯಾವೂರು ಎಂದೆಲ್ಲ ಅವರನ್ನೂ ವಿಚಾರಿಸುತ್ತಲೇ ಸಾಮಾನಿನ ಪೊಟ್ಟಣ ಕಟ್ಟಿಕೊಡುವುದರ ಜೊತೆಗೆ ಎಲ್ಲರಿಗೊಂದೊಂದು ಪೆಪ್ಪರಮೆಂಟ್ ಕೂಡಾ ಕೊಡುತ್ತಿದ್ದ. ಈಗಿನ ಮಕ್ಕಳು ಅಂಗಡಿಗೆ ಹೋಗುವುದಂತೂ ದೂರದ ಮಾತು, ಕೂತಲ್ಲೇ ಏನಾದರೂ ಆನ್ಲೈನ್‌ನಲ್ಲಿ ಆರ್ಡರ್ ಮಾಡಿ ಎಂದರೆ ಮುಖ ಸೊಟ್ಟ ಮಾಡುತ್ತಾರೆ.

ಮಕ್ಕಳೆಲ್ಲ ಯಾವಾಗಲೋ ಒಂದಾಗಿ ಬಿಡುತ್ತಿದ್ದೆವು. ಅವರಿಗೆ ಗೊತ್ತಿದ್ದ ಆಟ ನಮಗೆ, ನಮಗೆ ಗೊತ್ತಿದ್ದ ಆಟ ಅವರಿಗೆ ಹೇಳಿಕೊಟ್ಟು ಎಲ್ಲರೂ ಕೂಡಿ ಆಡುವುದಿತ್ತು. ಸಂಜೆಯ ಹೊತ್ತು ಹಿರಿಕಿರಿಯರೆನ್ನದೆ ಎಲ್ಲರೂ ಸೇರಿ ಅಳಗುಳಿ ಮಣೆ, ಚವ್ವಂಗ, ಪಗಡೆಯಾಟ ಆಡುತ್ತಿದ್ದೆವು. ಮನೆಯವರು ಬೇರೆ, ಬಂದವರು ಬೇರೆ ಎಂದು ಎಂದಿಗೂ ಅನ್ನಿಸುತ್ತಲೇ ಇರಲಿಲ್ಲ. ಹೊರಗೆ ಆಡುತ್ತಿದ್ದ ಹೆಣ್ಣುಮಕ್ಕಳನ್ನು ಕರೆದು ಎಣ್ಣೆ ಹಚ್ಚಿ, ಹೇನು ನೋಡಿ, ಬಿಗಿಯಾಗಿ ಜಡೆಹಾಕಿ, ಹೂಮುಡಿಸಿ, ಹುಡುಗರಿಗಾದರೆ ಎಣ್ಣೆ ಮೆತ್ತಿ ಕ್ರಾಪ್ ಬಾಚಿ ಕಳಿಸುವ ಕೆಲಸವನ್ನೂ ಬಂದ ಹೆಂಗಸರೇ ಮಾಡುತ್ತಿದ್ದುದಿತ್ತು. ಟೀವಿ, ಮೊಬೈಲು, ಜಾಲತಾಣವಿಲ್ಲದ ಆ ಕಾಲದಲ್ಲಿ ಮನೆಗೆ ಬಂದ ಅತಿಥಿಗಳನ್ನು ದೇವಸ್ಥಾನಗಳಿಗೋ ಅಥವಾ ಊರಿನಲ್ಲೇ ಇದ್ದ ಬೇರೆ ಬಂಧುಗಳ ಮನೆಗೋ ಭೇಟಿಗೆಂದು ಕರೆದೊಯ್ಯುವುದಿತ್ತು. ಬೇಕರಿ, ಚಾಟ್ಸ್ ಎಂದೆಲ್ಲ ಗೊತ್ತಿರದ ಆ ಕಾಲದಲ್ಲಿ ಸಂಜೆಯಾಗುತ್ತಲೇ ಮಂಡಕ್ಕಿ ಹುರಿದು, ಹೊರಗಡೆ ಬೀದಿ ಬದಿಯಲ್ಲಿ ಬಿಸಿಬಿಸಿಯಾಗಿ ಮಾಡುತ್ತಿದ್ದ ಮೆಣಸಿನಕಾಯಿ ಬೋಂಡಾ, ಆಂಬೊಡೆ, ಅತ್ತಿಕಾಯಿ ಹೀಗೆ ಯಾವುದಾದರೊಂದು ತರಿಸಿ ಎಲ್ಲರೂ ಬಾಯಾಡಿಸುವುದಿತ್ತು.

ರಾತ್ರಿ ನಡುಮನೆ, ಪಡಸಾಲೆಯ ಕಸ ಹೊಡೆದು, ನೆಲ ಒರೆಸಿ, ಗಂಡಸರಿಗೆಲ್ಲ ಹೊರಗಡೆ, ಹೆಣ್ಣುಮಕ್ಕಳು ಹಾಗೂ ಮಕ್ಕಳಿಗೆ ನಡುಮನೆಯಲ್ಲಿ ಜಮಖಾನ, ಚಾಪೆ ಅಥವಾ ಹಾಸಿಗೆ ಹಾಸಿ, ದಿಂಬು, ಬೆಡ್ ಶೀಟು ಇಟ್ಟರೆ ಮಕ್ಕಳ ಕೆಲಸ ಮುಗಿಯಿತು. ಎಲ್ಲರೂ ಒಬ್ಬರಿಗೊಬ್ಬರು ಸುದ್ದಿ ಹೇಳುತ್ತಾ ಮಲಗುತ್ತಿದ್ದರು. ಈಗಿನವರ ಹಾಗೆ ಬಂದವರಿಗೊಂದು ಸೆಪರೇಟು ಗೆಸ್ಟ್ ರೂಮು, ಅದಕ್ಕಂಟಿದ ಬಾತ್‌ರೂಮು ಅವರ ಪಾಡಿಗೆ ಅವರು, ಇವರ ಪಾಡಿಗೆ ಇವರು, ಪರಸ್ಪರ ಮಾತು ಕತೆ ಏನೂ ಸ್ವಾರಸ್ಯವಿಲ್ಲದೆ, ಮೊಬೈಲ್ ತೀಡುತ್ತಾ ದಿನದೂಡುವ ಕಾಲ ಅದಾಗಿರಲಿಲ್ಲ.

ಬಂದವರೇನೂ ಈಗಿನವರ ಹಾಗೆ ಎರಡು ದಿನಕ್ಕೆ ಎರಡೆರಡು ಟ್ರಾಲಿ, ಸೂಟ್‌ಕೇಸು ತುಂಬಾ ಬಟ್ಟೆಗಳನ್ನು ಹೊತ್ತು ತರುತ್ತಿರಲಿಲ್ಲ. ಇದ್ದುದರಲ್ಲೇ ಒಳ್ಳೆಯ ಒಂದೆರಡು ಬಟ್ಟೆಗಳನ್ನು ಇಟ್ಟುಕೊಂಡು ಬರುತ್ತಿದ್ದರು. ಅದರಲ್ಲೂ ಹೆಂಗಸರು ತಾವು ತಂದ ಬಟ್ಟೆ ಅವರು ಉಡುತ್ತಿದ್ದುದೇ ಕಡಿಮೆ. ಅವರು ಸ್ನಾನಕ್ಕೆ ಹೊರಡುತ್ತಿದ್ದ ಹಾಗೇ ಅಮ್ಮ, ಚಿಕ್ಕಮ್ಮ ಇಬ್ಬರೂ ತಮ್ಮ ತಮ್ಮಲ್ಲಿದ್ದ ಒಳ್ಳೆಯ ಸೀರೆ ತಂದು, ಇದನ್ನು ಉಟ್ಟುಕೊಳ್ಳಿ ಎಂದು ಅವರ ಮುಂದೆ ಹಿಡಿಯುತ್ತಿದ್ದರು. ಯಾರಿಗೂ ಬೇಸರ ಮಾಡದೆ ಒಂದು ದಿನ ಇವರದು, ಮತ್ತೊಂದು ದಿನ ಅವರದು ಉಟ್ಟಾಗಲೇ ಮನೆಯ ಹೆಂಗಸರಿಗೆ ಸಮಾಧಾನ. ಮದುವೆಗೆ ಬಂದಿರುವವರಾಗಿದ್ದರೆ ರೇಷ್ಮೆ ಸೀರೆಯನ್ನೂ ಉಡಲು ಕೊಡುತ್ತಿದ್ದುದಿತ್ತು. ಕೆಲವೊಮ್ಮೆ ಆಕಸ್ಮಿಕವಾಗಿ ಉಳಿಯುವ ಪರಿಸ್ಥಿತಿ ಬಂದಾಗ ಮನೆಯವರ ಒಳಲಂಗ, ರವಿಕೆಯನ್ನೂ ಸಹ ಅವರವರ ಅಳತೆಗೆ ಸೂಜಿ ದಾರದಲ್ಲಿ ಹೊಲಿಗೆ ಹಾಕಿಕೊಂಡು ಉಡುತ್ತಿದ್ದುದ್ದುಂಟು. ಮಕ್ಕಳ ಬಟ್ಟೆಗಳೂ ಅಷ್ಟೇ, ಮನೆಯಲ್ಲಿರುವ ಯಾರಾದರೊಬ್ಬರು ಮಕ್ಕಳ ಅಳತೆ ಹೆಚ್ಚೂ ಕಡಿಮೆ ಸರಿಹೊಂದುತ್ತಿತ್ತು. ಸಡಿಲವೋ, ಉದ್ದವೋ ಅದೆಲ್ಲ ನೋಡುವಷ್ಟು ಪುರುಸೊತ್ತು ಯಾರಿಗೂ ಇರುತ್ತಿರಲಿಲ್ಲ, ಅವುಗಳಿಗೆ ಪ್ರಾಮುಖ್ಯತೆಯೂ